# ಸಹ್ಯಾದ್ರಿ ಕಾಲೇಜು: ಜಾನಪದ ನೃತ್ಯ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ



ಸ್ಪರ್ಧೆಯಲ್ಲಿ ಸಹ್ಯಾದ್ರಿ ಕಾಲೇಜ್ ತಂಡ ಪ್ರಥಮ ಸ್ಥಾನ ಪಡೆದುಕೊಂಡಿದೆ.

**ಮಹಾನಗರ,** ಅ. 20: ಇನ್ಫೋಸಿಸ್ ನಡೆಸಿದ 'ಪ್ರಿಸ್ಮ್-ಕ್ಯಾಚ್ ದ ಲೈಟ್' ಹೆಸರಿನ ಜಾನಪದ ನೃತ್ಯ ಸ್ಪರ್ಧೆಯಲ್ಲಿ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನ ದ್ವಿತೀಯ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿ ತಂಡವು ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದುಕೊಂಡಿದೆ.

ವಿದ್ಯಾರ್ಥಿ ತಂಡದಲ್ಲಿ ಇ.ಸಿ. ವಿಭಾಗದಿಂದ ಶಿಬಾನಿ ಬಿ. ಕುಂದರ್, ಸನ್ನಿಧಿ, ಶ್ರದ್ಧಾ ಮತ್ತು ಐ.ಎಸ್. ವಿಭಾಗದಿಂದ ಎಸ್. ಮೈತ್ರಿ, ವಿಷ್ಣು ಹೆಬ್ಬಾರ್, ಅಪೂರ್ವಾ ರಾವ್ ಬಿ., ನೇಹಾ ಎಸ್., ಶ್ರಾವ್ಯಾ, ರೋಹಿತ್, ಕಾವ್ಯಾ ಶೆಟ್ಟಿ ಅವಿಜ್ಞಾ ಎಸ್. ಜಿ. ಹಾಗೂ ಸಿ.ಎಸ್. ವಿಭಾಗದಿಂದ ಅಶ್ವೀಜಾ ಇವರುಗಳು ಇನ್ಫೋಸಿಸ್‌ನಲ್ಲಿ ನಡೆದ ಜಾನಪದ ನೃತ್ಯ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ವಿದ್ಯಾರ್ಥಿಗಳೊಂದಿಗೆ ಸಹ್ಯಾದ್ರಿ ಕಾಲೇಜಿನ ಸಾಂಸ್ಕೃತಿಕ ವಿಭಾಗದ ಮುಖ್ಯಸ್ಥ ನವೀನ್ ಪಿಲಾರ್ ಇದ್ದು ತಂಡಕ್ಕೆ ಮಾರ್ಗದರ್ಶನ ಮಾಡಿದ್ದಾರೆ.